ಕರ್ನಾಟಕ ಸರ್ಕಾರ

Government of Karnataka

# ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ರಾಯಚೂರು

# Raichur Institute Of Medical Sciences, Raichur

(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ) (Govt. Autonomous Institution)

ಹೈದ್ರಾಬಾದ್ ರೋಡ್, ರಾಯಚೂರು –584102 Hydrabad Road, Raichur -584102

Web. www. rims-raichur.com Phone /Fax-08532-238488/89 Email : info@rims-raichur.com

ಸಂ. ರಿಮ್ಸ್ /ಸಿಬ್ಬಂದಿ(2)/ 2017–18 /1212 ದಿನಾಂಕ: 14.08.2017

## ಪ್ರಕಟಣೆ

**ವಿಷಯ :** ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ ರಾಯಚೂರು ಇಲ್ಲಿ ಖಾಲಿ ಇರುವ ಶುಶ್ರೂಷಕರ ಹುದ್ದೆಗಳನ್ನು ನೇಮಕಾತಿ ನೀಡುವ ಸಂಬಂಧ 10% ಹೆಚ್ಚುವರಿ ಪಟ್ಟಿಯಲ್ಲಿಯ ಅಭ್ಯರ್ಥಿಯ ಮೂಲ ದಾಖಲೆಗಳ ಪರಿಶೀಲನೆ ಬಗ್ಗೆ.

**ಉಲ್ಲೇಖ :** 1) ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು ಇವರ ಪತ್ರ ಸಂಖ್ಯೆ: ಇಡಿ/ಕೆಇಎ/ಆಡಳಿತ/45/14–15 ದಿನಾಂಕ 24.10.2016.

2) ಸದರಿ ಪತ್ರ ಸಮ ಸಂಖ್ಯೆ ದಿನಾಂಕ: 10.04.2017.

3) ಈ ಸಂಸ್ಥೆಯ ಪ್ರಕಟಣೆ ಸಂಖ್ಯೆ: ರಿಮ್ಸ್/ಸಿಬ್ಬಂದಿ(2)/2016–17/769, ದಿನಾಂಕ: 30.05.2017.

4) ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೈ.ಶಿ) ಇವರ ಪತ್ರ ಸಂಖ್ಯೆ: ಆಕುಕ 154 ಎಂಎಂಇ 2017 ದಿನಾಂಕ 05.08.2017

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಉಲ್ಲೇಖಿತ ಪತ್ರದಲ್ಲಿ ಸೂಚಿಸಿದಂತೆ ತಿಳಿಯಪಡಿಸುವದೇನೆಂದರೆ ಬಿ.ಎಸ್.ಸಿ ನರ್ಸಿಂಗ್ / ಡಿಪ್ಲೋಮಾ ನರ್ಸಿಂಗ್ ಅಭ್ಯರ್ಥಿಗಳ 2ನೆ ಹಂತ 10% ಹೆಚ್ಚುವರಿ ಪಟ್ಟಿ ಆಯ್ಕೆಪಟ್ಟಿಯಂತೆ ಮೂಲ ದಾಖಲಾತಿಗಳನ್ನು ಪರಿಶೀಲನೆಗಾಗಿ ಹಾಗೂ ಮುಂದಿನ ನೇಮಕಾತಿ ಪ್ರಕ್ರಿಯೆಗಾಗಿ ಅಗತ್ಯವಿರುವ ಪ್ರಮಾಣ ಪತ್ರ ಇತ್ಯಾಧಿಗಳನ್ನು ಪರಿಶೀಲನೆಗಾಗಿ ಈ ಕೆಳಗಿನಂತೆ ನಿಗದಿ ಪಡಿಸಲಾಗಿದೆ.

1) ಡಿಪ್ಲೋಮಾ ನರ್ಸಿಂಗ್ ಅಭ್ಯರ್ಥಿಗಳು ಮೂಲ ದಾಖಲಾತಿಗಳನ್ನು ಪರಿಶೀಲನೆಗಾಗಿ ದಿನಾಂಕ: 30.08.2017 ರಂದು 10.30 A.M.

2) ಬಿ.ಎಸ್.ಸಿ ನರ್ಸಿಂಗ್ ಅಭ್ಯರ್ಥಿಗಳು ಮೂಲ ದಾಖಲಾತಿಗಳನ್ನು ಪರಿಶೀಲನೆಗಾಗಿ ದಿನಾಂಕ: 31.08.2017 ರಂದು 10.30 A.M.

ಸದರಿ ದಿನಾಂಕಗಳಂದು ಸಂಬಂಧ ಪಟ್ಟ ಆಯ್ಕೆ ಹೊಂದಿದ ಅಭ್ಯರ್ಥಿಗಳು ಮೂಲ ದಾಖಲೆಗಳೊಂದಿಗೆ ಹಾಗೂ ಅವುಗಳ ಒಂದು ಸೆಟ್ ದೃಢೀಕರಿತ ಪ್ರತಿಗಳೊಂದಿಗೆ ಈ ಸಂಸ್ಥೆಯ ಆಡಳಿತ ವಿಭಾಗಕ್ಕೆ ಖುದ್ದಾಗಿ ಹಾಜರು ಇರುವಂತೆ ತಿಳಿಯಪಡಿಸಲಾಗಿದೆ. ಹಾಗೂ ಸದರಿ ಆಯ್ಕೆಯಾದ ಅಭ್ಯರ್ಥಿಗಳು ನೀಡಿರುವ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ಹಾಗೂ ಹಿಂದುಳಿದ ವರ್ಗಗಳ ಪ್ರಮಾಣ ಪತ್ರಗಳನ್ನು ಸಿಂಧುತ್ವ ಉದ್ದೇಶಕ್ಕಾಗಿ ಸಂಬಂಧಿಸಿದ ಜಿಲ್ಲಾಧಿಕಾರಿಗಳಿಗೆ ಕಳುಹಿಸಲಾಗುವುದು.

ಅಭ್ಯರ್ಥಿಗಳ ಬಗ್ಗೆ ಚಾರಿತ್ರ ನಡತೆ ಕುರಿತು ಸತ್ಯಾಪಣ ವರದಿಯನ್ನು ಪೋಲಿಸ್ ಇಲಾಖೆಯಿಂದ ವೈದ್ಯಕೀಯ ಮಂಡಳಿಯಿಂದ ದೇಹದಾಢ್ಯತೆ ದೃಢೀಕರಣ ಪತ್ರ, ಅಂಗವಿಕಲ ಚೇತನ ಪ್ರಮಾಣ ಪತ್ರ, ಮತ್ತು ಸಿಂಧುತ್ವ ಪ್ರಮಾಣ ಪತ್ರ ಹಾಗೂ ಹೈದ್ರಾಬಾದ್–ಕರ್ನಾಟಕ ಸ್ಥಳೀಯ ವೃಂದದ ಪ್ರಮಾಣ ಪತ್ರ ಹಾಗೂ ನೇಮಕಾತಿ ಸಂಬಂಧ ಇತರೆ ದಾಖಲೆ ನೈಜತೆ ಬಗ್ಗೆ ಸಂಬಂಧಪಟ್ಟ ಪ್ರಾಧಿಕಾರದಿಂದ ಪಡೆದನಂತರವೇ ನೇಮಕಾತಿ ಆದೇಶ ನೀಡಲಾಗುವುದು.

ಉಲ್ಲೇಖ (1) ರನ್ವಯ ದಿನಾಂಕ: 24.10.2016 ರಂದು ಕಳುಹಿಸಿದ ಮುಖ್ಯ ಪಟ್ಟಿಯಲ್ಲಿನ 196 ಶುಶ್ರೂಷಕ ಅಭ್ಯರ್ಥಿಗಳಲ್ಲಿ 163 ಜನ ಶುಶ್ರೂಷಕರಿಗೆ ನೇಮಕಾತಿ ಆದೇಶ ನೀಡಲಾಗಿದ್ದು, 7 ಜನ ಶುಶ್ರೂಷಕರು ಕರ್ತವ್ಯಕ್ಕೆ ವರದಿಮಾಡಿಕೊಂಡಿರುವದಿಲ್ಲ ಹಾಗೂ ಇನ್ನುಳಿದ 33 ಜನ ಶುಶ್ರೂಷಕ ಅಭ್ಯರ್ಥಿಗಳ ಸಿಂಧುತ್ವ ಪ್ರಮಾಣ ಪತ್ರ ಇತರೆ ದಾಖಲೆಗಳು ಸ್ವೀಕೃತವಾಗಿರುವದಿಲ್ಲ ಕಾರಣ ಉಲ್ಲೇಖ (3) ರಂತೆ ಈ ಸಂಸ್ಥೆಯಿಂದ ಪ್ರಕಟಣೆ ಹೊರಡಿಸ 15 ದಿನ ಕಾಲಾವಕಾಶ ನೀಡಲಾಗಿತ್ತು ಕೆಲಸಕ್ಕೆವರದಿ ಮಾಡಿಕೊಂಡಿರುವದಿಲ್ಲ (33+7 =40) ಜನ ಶುಶ್ರೂಷಕರನ್ನು ಮಾತ್ರ ಹೆಚ್ಚುವರಿ ಪಟ್ಟಿಯಿಂದ ಆಯ್ದು ಅಗತ್ಯ ಪರಿಶೀಲನೆ ಮಾಡಿದ ನಂತರ ನೇಮಕಾತಿ ಆದೇಶ ನೀಡಲಾಗುವುದು ಎಂದು ತಿಳಿಯ ಪಡಿಸಲಾಗಿದೆ.

ನಿರ್ದೇಶಕರು
ರಾಯಚೂರು ವೈದ್ಯಕೀಯ ವಿಜ್ಞಾನಗಳ ಸಂಸ್ಥೆ,
ರಾಯಚೂರು

**ಇವರಿಗೆ,**

ಸಂಬಂಧಪಟ್ಟ ಅಭ್ಯರ್ಥಿಗಳಿಗೆ

**ಪ್ರತಿಗಳು:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, (ವೈದ್ಯಕೀಯ ಶಿಕ್ಷಣ), ಬಹು ಮಹಡಿಗಳ ಕಟ್ಟಡ, 6ನೇ ಮಹಡಿ, ಬೆಂಗಳೂರು.
2. ನಿರ್ದೇಶಕರು, ವೈದ್ಯಕೀಯ ಶಿಕ್ಷಣ ನಿರ್ದೇಶನಾಲಯ, ಆನಂದ ರಾವ್ ವೃತ್ತ, ಬೆಂಗಳೂರು.
3. ಕಾರ್ಯನಿರ್ವಾಹಕ ನಿರ್ದೇಶಕರು ಪರೀಕ್ಷಾ ಪ್ರಧೀಕಾರ, 18ನೇ ಅಡ್ಡ ರಸ್ತೆ ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು–560012.
4. ಕಛೇರಿ ಪ್ರತಿ.